ಕರ್ನಾಟಕ ಸರ್ಕಾರ

ಸಂಖ್ಯೆ:ಕೈತಉ/ಕೆಎಸ್‌ಡಿಸಿ/ವಿವ- /2021-22

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ
ಕೌಶಲ್ಯ ಮಿಷನ್, ಕೌಶಲ್ಯ ಭವನ,
ಡೈರಿವೃತ್ತ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-029,
ದಿನಾಂಕ: 07-08-2021

ಗೆ,

ತರಬೇತುದಾರರು,

ಮೆ: **THE RASTRIYA COMPUTER SAKSHARATHA SAMITHI (VTP0000425)**

**ಮಾನ್ಯರೇ,**

**ವಿಷಯ:-** 2021-22ನೇ ಸಾಲಿಗೆ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ (CMKKY) ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕಾರ್ಯಾದೇಶ ನೀಡುವ ಕುರಿತು.

******

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021-22ನೇ ಸಾಲಿನಲ್ಲಿ ತಮ್ಮ ಸಂಸ್ಥೆಯ ಮುಖಾಂತರ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ (CMKKY) ಯೋಜನೆಯಡಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ತಮ್ಮ ತರಬೇತಿ ಸಂಸ್ಥೆಯಲ್ಲಿರುವ ಜಾಬ್‌ರೋಲ್‌ಗಳಿಗನುಗುಣವಾಗಿ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಈ ಕಾರ್ಯಾದೇಶವು ತಲುಪಿದ ಕೂಡಲೇ **Contract Agreement Copy (Revised Contract Agreement Format Dtd.05.10.2020** - http://www.kaushalkar.com/article/annexure-e-contract-for-training-provider/) ಯನ್ನು ಸಿದ್ಧಪಡಿಸಿಕೊಂಡು ನಿಗಮಕ್ಕೆ ಸಲ್ಲಿಸಿ, ಒಪ್ಪಿಗೆ ಪಡೆಯ ತಕ್ಕದ್ದು, ಕರಾರು ಒಪ್ಪಂದಕ್ಕೆ ಸಹಿ ಪಡೆದ ನಂತರವೇ ತಮಗೆ ನಿಗಧಿಪಡಿಸಿರುವ ಜಾಬ್‌ರೋಲ್‌ಗಳಲ್ಲಿ ತರಬೇತಿದಾರರನ್ನು ಆಯ್ಕೆ ಮಾಡಿಕೊಳ್ಳಲು ಅನುಮತಿ ನೀಡಲಾಗುವುದು.

ಮುಂದುವರೆದು, ದಿನಾಂಕ: **18-07-2021** ರಂದು ರಾಜ್ಯ ಸರ್ಕಾರ ನೀಡಿರುವ ಮಾರ್ಗಸೂಚಿ (SOP)ಯ ಅನುಸಾರ ಮೊದಲ ಹಂತದ ಕೋವಿಡ್ ಲಸಿಕೆಯನ್ನು ಪಡೆದಿರುತ್ತಾರೆಂದು ಖಚಿತಪಡಿಸಿಕೊಂಡು ತರಬೇತಿ ಪ್ರಾರಂಭಿಸತಕ್ಕದೆಂದು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು,
ಕೆ.ಎಸ್.ಡಿ.ಸಿ

ಕರ್ನಾಟಕ ಸರ್ಕಾರ

ಸಂಖ್ಯೆ:ಕೈತಲು/ಕೆಎಸ್‌ಡಿಸಿ/ವಿವ- /2021-22

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ,
ಕೌಶಲ್ಯ ಭವನ, ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-29
ದಿನಾಂಕ: 07-08-2021

**e-mail id:cmkkytraining2020@gmail.com**

# WORK ORDER (ಕಾರ್ಯಾದೇಶ)

**ವಿಷಯ:-** ಮೆ: **THE RASTRIYA COMPUTER SAKSHARATHA SAMITHI (VTP0000425)** ರವರಿಗೆ, 2021-22ನೇ ಸಾಲಿನಲ್ಲಿ ಸಿ.ಎಂ.ಕೆ.ಕೆ.ವೈ ಯೋಜನೆಯಡಿ ಅಲ್ಪಾವಧಿ ತರಬೇತಿ ಕಾರ್ಯಕ್ರಮ ನೀಡಲು, ಕಾರ್ಯಾದೇಶ ನೀಡುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೆ: **THE RASTRIYA COMPUTER SAKSHARATHA SAMITHI (VTP0000425)** ರವರು ಕೆ.ಎಸ್.ಡಿ.ಸಿ ಯಿಂದ, ಸಿ.ಎಂ.ಕೆ.ಕೆ.ವೈ ಯೋಜನೆಯಡಿಯಲ್ಲಿ ತರಬೇತಿ ನೀಡಲು ಮಾನ್ಯತೆ ಪಡೆದಿರುತ್ತದೆ. ಸದರಿ ಸಂಸ್ಥೆಯವರಿಗೆ, 2021-22ನೇ ಸಾಲಿನಲ್ಲಿ ಸಿ.ಎಂ.ಕೆ.ಕೆ.ವೈ ಯೋಜನೆಯಡಿಯಲ್ಲಿ ಈ ಕೆಳಕಂಡ ಜಾಬ್‌ರೋಲ್‌ಗಳಲ್ಲಿ ಅನುಬಂಧ-1 ರಲ್ಲಿ ನಮೂದಿಸಿರುವಂತೆ ತರಬೇತಿ ನೀಡಲು ಅನುಮತಿಸಲಾಗಿದೆ.

ಸದರಿ ತರಬೇತಿ ಕಾರ್ಯಕ್ಕೆ ತಗಲುವ ವೆಚ್ಚವನ್ನು ಸಿ.ಎಂ.ಕೆ.ಕೆ.ವೈ ಯೋಜನೆಗೆ ಬಿಡುಗಡೆಯಾಗಿರುವ ಅನುದಾನದ ಲೆಕ್ಕಶೀರ್ಷಿಕೆ: 2230-02-101-0-09 ಯಡಿಯಲ್ಲಿ ತರಬೇತಿ ವೆಚ್ಚವನ್ನು ಭರಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು,
ಕೆ.ಎಸ್.ಡಿ.ಸಿ

ಷರತ್ತುಗಳು:

1. ಮೆ: **THE RASTRIYA COMPUTER SAKSHARATHA SAMITHI (VTP0000425)** ರವರು ಸಿ.ಎಂ.ಕೆ.ಕೆ.ವೈ ಮಾರ್ಗಸೂಚಿಯನುಸಾರ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳತಕ್ಕದ್ದು.
2. ಸಿ.ಎಂ.ಕೆ.ಕೆ.ವೈ ಮಾರ್ಗಸೂಚಿಯ, ಮೀಸಲಾತಿಯನುಸಾರ SC ಮತ್ತು ST ತರಬೇತಿದಾರರನ್ನು ಆಯ್ಕೆ ಮಾಡಿಕೊಂಡು, ತರಬೇತಿ ಕಾರ್ಯಕ್ರಮ ನಡೆಸತಕ್ಕದ್ದು.
3. ಉಳಿದಂತೆ, ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಮಾರ್ಗಸೂಚಿಯನುಸಾರ ಅಲ್ಪಾಸಂಖ್ಯಾತರಿಗೆ ಶೇ.15% ರಷ್ಟು ವಿಶೇಷ ಚೇತನರಿಗೆ ಶೇ.5% ರಷ್ಟು ಹಾಗೂ ಮಹಿಳೆಯರಿಗೆ ಒಟ್ಟಾರೆ ಶೇ.33% ರಷ್ಟು ಮೀಸಲಾತಿಯನ್ನು ಜಾಬ್ ರೋಲ್‌ಗಳ ಮುಖಾಂತರ ಸರಿದೂಗಿಸತಕ್ಕದ್ದು. ತಂಡವನ್ನು (Batch) ರಚಿಸುವಾಗ ಸದರಿ ಮೀಸಲಾತಿಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ಸಿ.ಎಂ.ಕೆ.ಕೆ.ವೈ ಮಾರ್ಗಸೂಚಿಯಂತೆ ಹಂತ, ಹಂತವಾಗಿ ತರಬೇತಿ ವೆಚ್ಚವನ್ನು ಪಾವತಿಸಲಾಗುವುದು.
5. ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸುವ ಮುನ್ನ ಕರಾರು ಒಪ್ಪಂದ ಪತ್ರವನ್ನು ಕೆ.ಎಸ್.ಡಿ.ಸಿ.ಗೆ ಸಲ್ಲಿಸಿ, ಸಹಿ ಪಡೆದ ನಂತರ ತರಬೇತಿ ಪ್ರಾರಂಭಿಸತಕ್ಕದ್ದು.
6. ಕರಾರು ಒಪ್ಪಂದಕ್ಕೆ ಸಹಿ ಪಡೆದ ನಂತರವೇ, Batch approval ನೀಡಲಾಗುವುದು.
7. ಪ್ರಸ್ತುತ ನೀಡಲಾಗುವ ಕರಾರು ಒಪ್ಪಂದವು ಒಂದು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ.
8. ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದನೆಗೊಂಡ, ಕಾರ್ಯಾದೇಶದಲ್ಲಿ ವಿವರಿಸಿರುವಂತೆ, Job Role ಗಳಲ್ಲಿ ನೀಡಲಾಗುವ ತರಬೇತಿ ಕಾರ್ಯವು ಮುಕ್ತಾಯವಾದ ನಂತರ, ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸಿ.ಎಂ.ಕೆ.ಕೆ.ವೈ ಮಾರ್ಗಸೂಚಿಯನುಸಾರ ಉದ್ಯೋಗ ಕಲ್ಪಿಸತಕ್ಕದ್ದು, ತಪ್ಪಿದ್ದಲಿ ತರಬೇತಿ ನಡೆಸಲು ಮುಂದಿನ ಬ್ಯಾಚ್‌ಗಳಿಗೆ ಅನುಮೋದನೆ ನೀಡಲಾಗುವುದಿಲ್ಲ, ಹಾಗೂ 2020-21ನೇ ಸಾಲಿನಲ್ಲಿ ನೀಡಲಾದ ತರಬೇತಿಗನುಸಾರವಾಗಿ ಕಲ್ಪಿಸಲಾಗಿರುವ ಹಾಗೂ ಉದ್ಯೋಗ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
9. ಪ್ರಸ್ತುತ ನೀಡಲಾಗುವ ಕಾರ್ಯದೇಶದಂತೆ ತರಬೇತಿ ಕಾರ್ಯಕ್ರಮವನ್ನು 20 ದಿನಗಳೊಳಗೆ ಪ್ರಾರಂಭಿಸತಕ್ಕದ್ದು, ಇಲ್ಲದಿದ್ದಲ್ಲಿ, ನೀಡಲಾಗಿರುವ ಕಾರ್ಯದೇಶವು ಸ್ವಯಂಚಾಲಿತವಾಗಿ ರದ್ದಾಗುತ್ತದೆ.
10. ಮೇಲ್ಕಂಡ ಎಲ್ಲಾ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು, ಪಾಲಿಸದಿದ್ದಲ್ಲಿ, ಅಂತಹ ತರಬೇತಿಯನ್ನು ಮಾನ್ಯತೆ ಮಾಡಲಾಗುವುದಿಲ್ಲ. ಹಾಗೂ ಸರ್ಕಾರ/ನಿಗಮದಿಂದ ಆಗಿಂದ್ದಾಗ್ಗೆ ಹೊರಡಿಸುವ ಮಾರ್ಗಸೂಚಿ ಹಾಗೂ ಷರತ್ತುಗಳನ್ನು ಪಾಲಿಸಲು ಸೂಚಿಸಲಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು,

ಕೆ.ಎಸ್.ಡಿ.ಸಿ